# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1616/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 28/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಚಂದ್ರಕಾಂತ ಶರಣಪ್ಪ ಕಿಲಾರಿ, ಕೊಡಗಾನೂರ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಚಂದ್ರಕಾಂತ್ ಶರಣಪ್ಪ ಕಿಲಾರಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ಗಂಗ ಕಲ್ಯಾಣ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಡಗನೂರು ಗ್ರಾಮದ 20 ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರ ಭಾವಚಿತ್ರಗಳನ್ನು ಅಂಟಿಸಿ ಸುಳ್ಳು ಸಹಿಗಳನ್ನು ಮಾಡಿ ವ್ಯಕ್ತಿಗಳ ಜಾತಿಯನ್ನು ಬದಲಾಯಿಸಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿರುತ್ತದೆ. ಈ ವಿಚಾರದಲ್ಲಿ ಕೊಡಗನೂರು ಗ್ರಾಮದ ಶ್ರೀ ಮಲ್ಲಪ್ಪ ಭೀಮಪ್ಪ ಹರಗೆ ಇವರು ಇಂತಹ ಅಕ್ರಮವನ್ನು ಎಸಗಿರುತ್ತಾರೆ. ಈ ಬಗ್ಗೆ ಎದುರುದಾರರ ಗಮನಕ್ಕೆ ತಂದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಹಾಗೆಯೇ ಪ್ರಕರಣದ ತನಿಖೆಯನ್ನು ನಮ್ಮ ಇಲಾಖೆಯ ಬೆಳಗಾವಿಯ ಆರಕ್ಷಕ ನಿರೀಕ್ಷಕರಿಗೆ ತನಿಖೆಗಾಗಿ ವಹಿಸಲಾಗಿದ್ದು, ಸದರಿಯವರು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ ತನಿಖಾಧಿಕಾರಿಯವರು ದೂರಿಗೆ ಸಂಬಂಧಿಸಿದಂತೆ ಸ್ಥಳಕ್ಕೆ ಭೇಟಿ ನೀಡಿದ್ದು, ಜಿಲ್ಲಾ ಪಂಚಾಯತ್ ಉಪವಿಭಾಗ, ಅಥಣಿಯ ಸಹಾಯಕ ಅಭಿಯಂತರರಾದ ಶ್ರೀ ಎಸ್.ಎಸ್. ಮಾಕಾಣಿ, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಬೆಳಗಾವಿಯ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಎಸ್.ಎನ್. ಬಾನಸಿ ಹಾಗೂ ಎಸ್ಕಾಂ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ ಮತ್ತು ಯೋಜನೆಯಡಿಯಲ್ಲಿ

(6)

ನಮೂದಿಸಲಾದ ಫಲಾನುಭವಿಗಳ ಕ್ಷಮಕ್ಷಮ ಶಿರಹಟ್ಟಿ ಗ್ರಾಮದ ಹತ್ತಿರ ಕೃಷ್ಣ ನದಿ ಯೋಜನೆ ಅಡಿಯಲ್ಲಿ ನೀರೆತ್ತುವ ವಿದ್ಯುತ್ ಮೋಟಾರ್ ಕೂಡಿಸಿರುವ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿದ್ದು, ಶಿರಹಟ್ಟಿ ಗ್ರಾಮದ ಶ್ರೀ ರಾಜೇಂದ್ರ ನೇಮಣ್ಣ ಕವಟಕೊಟ್ಟ ಇವರ ಜಮೀನಿಗೆ ಹೊಂದಿಕೊಂಡು ಹರಿಯುತ್ತಿರುವ ಕೃಷ್ಣ ನದಿಯ ದಂಡೆಯ ಮೇಲೆ ನೀರೆತ್ತುವ ಮೋಟಾರ್ ಸ್ಟಾರ್ಟರ್ ಬೋರ್ಡ್ ಹತ್ತಿರ ಹೋಗಿ ಪರಿಶೀಲಿಸಿದ್ದು, ಹಾಜರಿದ್ದ ದೂರುದಾರರಾದ ಶ್ರೀ ಮಲ್ಲಪ್ಪ ರಾಮಪ್ಪ ಪೂಜಾರಿ ಇವರ ಜಮೀನಿಗೆ ನೀರು ಹೋಗುತ್ತಿರುವ ಬಗ್ಗೆ ಫಲಾನುಭವಿಗಳಲ್ಲಿ ಒಬ್ಬರಾದ ಶ್ರೀ ಮಲ್ಲಪ್ಪ ಬಿವಾ ಹರಗೆ ಇವರು ಹೇಳಿಕೆ ನೀಡಿ ಸ್ಥಳವನ್ನು ತೋರಿಸಿರುತ್ತಾರೆ. ಪರಿಶೀಲನಾ ಕಾಲದಲ್ಲಿ ಹಾಜರಿದ್ದ ಶ್ರೀ ಆನಂದ ಲಕ್ಷ್ಮಣ ಪೂಜಾರಿ ಇವರು ತನ್ನ ತಂದೆ ಶ್ರೀ ಲಕ್ಷ್ಮಣ ದಶರತ್ ಪೂಜಾರಿ ಇವರ ಹೆಸರಿಗೆ ಇದ್ದು, ಇದನ್ನು ತಾವು 2009-10ನೇ ಇಸವಿಯಲ್ಲಿ ಕಾರ್ಪೋರೇಷನ್ ಬ್ಯಾಂಕ್, ಅಥಣಿ ಶಾಖೆಯಿಂದ ಸಾಲ ಮಾಡಿ ಪೈಪ್‌ಲೈನ್‌ಗಳನ್ನು ಹಾಕಿಸಿಕೊಂಡಿರುವುದಾಗಿಯೂ, 10 ಹೆಚ್‌ಪಿ ನೀರು ಎತ್ತುವ ವಿದ್ಯುತ್ ಮೋಟಾರ್‌ಅನ್ನು ಈ ಯೋಜನೆ ಮುಖ್ಯ ಫಲಾನುಭವಿ ಶ್ರೀ ಭೀಮಪ್ಪ ರಾಮಪ್ಪ ಪೂಜಾರಿ ಇವರು ಯೋಜನೆಯ ಮುಖ್ಯ ಫಲಾನುಭವಿಯಾಗಿದ್ದು, ಅಳವಡಿಸಿದ್ದ ಮೋಟಾರ್ ಅನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದು, ಇತರೆಯವರಿಗೆ ನೀರನ್ನು ನೀಡದೇ ಇರುವುದು ಕಂಡು ಬಂದಿರುತ್ತದೆಂದು, ದೂರುದಾರರು ತಿಳಿಸಿರುವಂತೆ 20 ಜನ ಅರ್ಜಿಗಳನ್ನು ಶ್ರೀ ಭೀಮಪ್ಪ ರಾಮಪ್ಪ ಪೂಜಾರಿ ಇವರು ತನ್ನ ಅರ್ಜಿಯೊಂದಿಗೆ ತಯಾರಿಸಿಕೊಂಡು, ಅವುಗಳಿಗೆ ಸುಳ್ಳು ಸಹಿಗಳನ್ನು ಮಾಡಿಸಿ ಹಾಗೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸಾಮೂಹಿಕ ಏತ ನೀರಾವರಿ ಯೋಜನೆ ಬಗ್ಗೆ ಇತರೆ ಫಲಾನುಭವಿಗಳಿಗೆ ಗೊತ್ತಾಗದಂತೆ ದಾಖಲಾತಿಗಳಲ್ಲಿ ಇರುವ ಫೋಟೋಗಳನ್ನು ಅಂಟಿಸದೇ ಬೇರೆಯವರ ಪೋಟೋಗಳನ್ನು ಅಂಟಿಸಿ ದೇವರಾಜ ಅರಸ್ ಹಿಂದುಳಿದ ವರ್ಗಗಳ ನಿಗಮಕ್ಕೆ ಸಲ್ಲಿಸಿ ಅಕ್ರಮವಾಗಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ರೂ.13,92,000/- ಯೋಜನೆಯನ್ನು ಮಂಜೂರು ಮಾಡಿಸಿಕೊಂಡು ಪೈಪ್‌ಲೈನ ಮುಖಾಂತರ ಕ್ರಷ್ಣಾ ನದಿಯಿಂದ ತನ್ನ ಜಮೀನಿಗೆ ನೀರನ್ನು ಪಡೆದುಕೊಂಡು ಇತರೆ ಪಲಾನುಭವಿಗಳಿಗೆ ನೀರನ್ನು ಕೊಡದೆ ತನ್ನ ಸಂಬಂಧಿಕರಿಗೆ ಹಾಗೂ ಪಾಂಡು ಕುಲಕರ್ಣಿ ಎನ್ನುವರರಿಗೆ ಬಾಡಿಗೆಗೆ ಕೊಟ್ಟಿರುವುದು ತಿಳಿದು ಬಂದಿರುತ್ತದೆ. ಹಾಗೆ ಇತರೆ 20 ಜನ ಫಲಾನುಭವಿಗಳಿಗೆ ಯಾವುದೇ ಸೌಲಭ್ಯ ಸಿಗುತ್ತಿರುವುದಿಲ್ಲ ಹಾಗೂ ನೀರು ಸಹ ದೊರೆಯುತ್ತಿಲ್ಲವೆಂಬುದು ವಿಚಾರಣ ಕಾಲದಲ್ಲಿ ಪಡೆದುಕೊಂಡ ಸಾಕ್ಷಿದಾರರ ಹೇಳಿಕೆ ಯಿಂದ ಮತ್ತು ಸ್ಥಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಶ್ರೀ ಭೀಮಪ್ಪ ರಾಮು ಪೂಜಾರಿ ಇವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವುದು ಸಹ ಸ್ಪಷ್ಟ ಪಟ್ಟಿರುತ್ತದೆ. ಸದರಿ ಯೋಜನೆ ಅನುಷ್ಠಾನಗೊಳಿಸುವ ಕಾಲಕ್ಕೆ ಪೂರ್ಣ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಗಿದ್ದ ಶ್ರೀ ಎಸ್.ಎನ್. ಬಾನಸಿ, ಜಿಲ್ಲಾ ವ್ಯವಸ್ಥಾಪಕರು, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಬೆಳಗಾವಿ ಇವರು ಫಲಾನುಭವಿಗಳು ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಾತಿಗಳನ್ನು ಮತ್ತು

N. Anand

12(1) (7) 28

ಫೋಟೋಗಳನ್ನು ಸರಿಯಾಗಿ ಪರಿಶೀಲಿಸದೆ ಹಾಗೂ ಪಲಾನುಭವಿಗಳನ್ನು ಸಂಪರ್ಕಿಸದೆ ಕಾಮಗಾರಿಯ ಹಣ ಬಿಡುಗಡೆ ಮಾಡುವಂತೆ ಮಾಡಿರುವುದು ಹಾಗೂ ಫಲಾನುಭವಿಗಳನ್ನು ಗುರುತಿಸದೇ ಇರುವುದರಿಂದ ಶ್ರೀ ಭೀಮಪ್ಪ ರಾಮು ಪೂಜಾರಿ ಈತನನ್ನು ಹೊರತುಪಡಿಸಿ ಇನ್ನುಳಿದ 20 ಜನ ಫಲಾನುಭವಿಗಳಿಗೆ ಸಾಮೂಹಿತ ಏತ ನೀರಾವರಿ ಯೋಜನೆಯ ಲಾಭ ದೊರೆಯದೆ ವಂಚಿತರಾಗಿರುತ್ತಾರೆ. ಇದರಲ್ಲಿ ಸದರಿ ಶ್ರೀ ಎಸ್.ಎನ್. ಬಾನಸಿ ಇವರ ಕರ್ತವ್ಯ ಮತ್ತು ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 3ನೇ ಎದುರುದಾರರಿಗೆ ನೀಡಲಾಗಿದ್ದ ನೋಟೀಸಿನ ಸ್ವೀಕೃತಿಯನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗಿದೆ. ಆದ್ದರಿಂದ, ಸದರಿಯವರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

4. 1 ಮತ್ತು 2ನೇ ಎದುರುದಾರರು 2008-09ನೇ ಸಾಲಿನಲ್ಲಿ ಸಮುದಾಯ ಏತ ನೀರಾವರಿ ಯೋಜನೆಯಡಿಯಲ್ಲಿ ಏತ ನೀರಾವರಿಯನ್ನು ಕೊಡಗನೂರು ಗ್ರಾಮಕ್ಕೆ ಮಂಜೂರಾಗಿದ್ದು, ಅದರಲ್ಲಿ ಶ್ರೀ ಭೀಮಪ್ಪ ಪೂಜಾರಿ ಮತ್ತು ಇನ್ನೀತರೆ 20 ಫಲಾನುಭವಿಗಳ ಹೆಸರುಗಳನ್ನು ಪರಿಗಣಿಸಲಾಗಿದ್ದು, ಸದರಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ತಮ್ಮ ಕಛೇರಿಯ ವ್ಯಾಪ್ತಿಗೆ ಬರುವುದಿಲ್ಲವೆಂದು, ಇದೇ ದೂರಿಗೆ ಸಂಬಂಧಿಸಿದಂತೆ ಶ್ರೀ ಮಲ್ಲಪ್ಪ ಭೀಮಪ್ಪ ಹರಗೆ ಇವರು ಒಂದು ಸಿವಿಲ್ ದಾವೆಯನ್ನು ಹೂಡಿದ್ದು (ಅಸಲು ದಾವೆ ನಂ.1447/2013) ಸದರಿ ದಾವೆಯು ಮುಕ್ತಾಯಗೊಂಡಿರುತ್ತದೆ. ಇದಾದ ನಂತರ ಕರ್ನಾಟಕ ಉಚ್ಛ ನ್ಯಾಯಾಲಯ ಧಾರವಾಡದಲ್ಲಿ ಡಬ್ಲ್ಯೂಪಿ ನಂ.105180-105181/2014 ರ ಪ್ರಕರಣಗಳು ಚಾಲ್ತಿಯಲ್ಲಿರುತ್ತದೆ. ಸದರಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ಜರುಗಿಸಲಾಗುವುದೆಂದು 1ನೇ ಎದುರುದಾರರಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ಇವರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

5. ಸದರಿ ಆಕ್ಷೇಪಣೆ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ಶ್ರೀ ಭೀಮಪ್ಪ ರಾಮು ಪೂಜಾರಿ ಇವರು ಮಾತ್ರ ಸದರಿ ಏತ ನೀರಾವರಿ ಯೋಜನೆಯ ಫಲವನ್ನು ಪಡೆದಿದ್ದು, ಇತರೆ 20 ಜನರಿಗೆ ಅದರ ಫಲ ಸಿಕ್ಕಿರುವುದಿಲ್ಲ. ಸದರಿ ಶ್ರೀ ಭೀಮಪ್ಪ ರಾಮಪ್ಪ ಪೂಜಾರಿ ಇವರು ಏತ ನೀರಾವರಿ ಯೋಜನೆಯಡಿಯಲ್ಲಿ ತಮಗೆ ಮಂಜೂರಾಗಿರುವ ನೀರನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ನದಿ ನೀರನ್ನು

N. Anand

ಬೇರೆಯವರಿಗೆ ಬಾಡಿಗೆಗೆ ನೀಡುತ್ತಿರುತ್ತಾರೆ. ಇತರೆ ಫಲಾನುಭವಿಗಳಿಗೆ ಏತ ನೀರಾವರಿ ನೀರಿನ್ನು ಪಡೆಯುವುದರಿಂದ ವಂಚಿತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

6. ದೂರಿನಂಶಗಳನ್ನು ಎದುರುದಾರರ ಆಕ್ಷೇಪಣೆಯನ್ನು, ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಶ್ರೀ ಭೀಮಪ್ಪ ರಾಮು ಪೂಜಾರಿ, ಕೊಡಗಾನೂರ ಇವರು ತನ್ನ ಅರ್ಜಿಯೊಂದಿಗೆ ಇತರೆ 20 ಜನರ ಅರ್ಜಿಗಳನ್ನು ತಾನೇ ತಯಾರಿಸಿ ಅವುಗಳಿಗೆ ಸುಳ್ಳು ಸಹಿಗಳನ್ನು ಮಾಡಿ ಸದರಿ ಅರ್ಜಿಗಳಿಗೆ ಸುಳ್ಳು ದಾಖಲಾತಿಗಳನ್ನು ಲಗತ್ತಿಸಿ ಅರ್ಜಿದಾರರ ಪೋಟೋಗಳನ್ನು ಲಗತ್ತಿಸದೇ ಇತರೆಯವರುಗಳ ಪೋಟೋಗಳನ್ನು ಅಂಟಿಸಿ ದೇವರಾಜ್ ಅರಸ್ ಹಿಂದುಳಿದ ವರ್ಗಗಳ ನಿಗಮಕ್ಕೆ ಸಲ್ಲಿಸಿ ಅಕ್ರಮವಾಗಿ ಗಂಗಾ ಕಲ್ಯಾಣ ಯೋಜನೆಯಲ್ಲಿ ರೂ.13,92,000/- ಯೋಜನೆಯನ್ನು ಮಂಜೂರು ಮಾಡಿಸಿಕೊಂಡು ತಾನೊಬ್ಬನೇ ಪೈಪ್‌ಲೈನ್ ಮುಖಾಂತರ ಕೃಷ್ಣ ನದಿಯಿಂದ ತನ್ನ ಜಮೀನಿಗೆ ನೀರನ್ನು ಪಡೆದುಕೊಂಡು ತನ್ನ ಸಂಬಂಧಿಕರಿಗೆ ನೀರನ್ನು ನೀಡಿ ಶ್ರೀ ಪಾಂಡು ಕುಲಕರ್ಣಿ ಎನ್ನುವವರಿಗೆ ಬಾಡಿಗೆಗೆ ನೀರನ್ನು ನೀಡುತ್ತಿರುವುದು ತನಿಖೆಯಿಂದ ಕಂಡು ಬಂದಿರುತ್ತೆ ಹಾಗೂ 20 ಜನ ಫಲಾನುಭವಿಗಳಿಗೆ ಸದರಿ ಯೋಜನೆಯ ಸೌಲಭ್ಯವನ್ನು ಸಿಗದಂತೆ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಶ್ರೀ ಭೀಮಪ್ಪ ರಾಮು ಪೂಜಾರಿ ಇವರು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ನಿಗಮಕ್ಕೆ ಸಲ್ಲಿಸಿ, ಅಕ್ರಮವಾಗಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ರೂ.13,92,000/- ಯೋಜನೆಯನ್ನು ಮಂಜೂರು ಮಾಡಿಸಿಕೊಂಡು, ಸದರಿ ಯೋಜನೆಯ ಫಲವನ್ನು ತಾನೊಬ್ಬನೆ ಅನುಭವಿಸುತ್ತಿದ್ದು, ಸದರಿಯವರು ಅಪರಾಧವನ್ನು ಎಸಗಿರುವುದು ಸಹ ಕಂಡು ಬಂದಿರುತ್ತದೆ. ಈ ಯೋಜನೆಯಡಿಯಲ್ಲಿ ಶ್ರೀ ಎಸ್.ಎನ್. ಬಾನಸಿ, ಜಿಲ್ಲಾ ವ್ಯವಸ್ಥಾಪಕರು, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ನಿಗಮ, ಬೆಳಗಾವಿ ಇವರು ಮೇಲೆ ತಿಳಿಸಿದಂತೆ ಫಲಾನುಭವಿಗಳ ಅರ್ಜಿಯನ್ನು ಸರಿಯಾಗಿ ಪರಿಶೀಲಿಸದೆ ಫಲಾನಭವಿಗಳ ಅರ್ಜಿಗಳೊಡನೆ ಸಲ್ಲಿಸಲಾದ ದಾಖಲಾತಿ ಹಾಗೂ ಪೋಟೋಗಳನ್ನು ಪರಿಶೀಲಿಸದೆ ಮತ್ತು ಫಲಾನುಭವಿಗಳನ್ನು ಸಂಪರ್ಕಿಸದೆ ಸದರಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಣವನ್ನು ಬಿಡುಗಡೆ ಮಾಡುವಂತೆ ಮಾಡಿರುತ್ತಾರೆ. ಇದರಿಂದ, ನಿಜವಾದ 20 ಫಲಾನುಭವಿಗಳು ಗಂಗಾ ಕಲ್ಯಾಣ ಯೋಜನೆಯಡಿ ಸಿಗಬೇಕಾದ ನೀರಿನ ಸೌಲಭ್ಯದಿಂದ ವಂಚಿತರಾಗಿರುವುದು ಸ್ಪಷ್ಟ ಪಟ್ಟಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಗಂಗಾ ಕಲ್ಯಾಣ ಯೋಜನೆಯ ಫಲವನ್ನು ಮೋಸವೆಸಗಿ ತಾನೊಬ್ಬನೇ ಪಡೆದು ಇತರೆ 20 ಜನ ಫಲಾನುಭವಿಗಳಿಗೆ ಸದರಿ ಯೋಜನೆಯ ಫಲಸಿಗದಂತೆ ಮಾಡಿರುವ ಶ್ರೀ ಭೀಮಪ್ಪ ರಾಮು ಪೂಜಾರಿ ಇವರ**

N. Ananda

ವಿರುದ್ಧ ವಂಚನೆ ಹಾಗೂ ಸುಳ್ಳು ದಾಖಲೆಯ ಸೃಷ್ಟಿ ಬಗ್ಗೆ ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ವಂಚನೆಯ ಮೂಲಕ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪಡೆದಿರುವ ಸೌಲಭ್ಯ/ಹಣವನ್ನು ಹಿಂಪಡೆಯಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.